ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳಿದ ಮೇಲೆ, ಅವರು ಉತ್ತರ ಕೊಡಲಿ. ಅವರು ಹೇಳಿ ಬಿಡಲಿ ಅದು ರೆಕಾರ್ಡ್‌ಗೆ ಹೋಗಲಿ.

ಅಧ್ಯಕ್ಷರು : ಅವರು ಒಪ್ಪಿಕೊಂಡಿದ್ದಾರೆ. Mr. Nanaiah, if you don't come to my rescue it becomes impossible for me to run the House. How am I to resolve this question? I am struggling my best to save the time. I have got to put 16 speakers through this place.

ಶ್ರೀ ಎಂ.ಸಿ. ನಾಣಯ್ಯ : ಮಂತ್ರಿಗಳು ಒಪ್ಪಿದ್ದಾರೆ. ಈ ಸದನ ಮುಗಿದ ಮೇಲೆ ನಿಮ್ಮನ್ನೂ ಯಾವುದು 29ಹಾಸ್ಟಲು ರದ್ದು ಮಾಡಿದ್ದಾರೆ ಅಲ್ಲಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿಯವರೆಗೆ, 'That order will be kept in abeyance temporarily. ಎಂದು ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

2. ಶಾಸನ ರಚನಾ ಕಾರ್ಯ ಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1996
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):ಮಾನ್ಯ ಅಧ್ಯಕ್ಷರೆ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1996ನೇ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

(ಅ) 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ.
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

---

* ಅನುಬಂಧ-1

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1996ರ ಕನ್ನಡ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಬೆಂಡಿಗಾನಹಳ್ಳಿ ಹತ್ತಿರ 23 ಎಕರೆ ಜಮೀನು ಡಿನೋಟಿಫೈ ಮಾಡಿರುವುದು

+ ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದಿಂದ ಉತ್ತರ ಕೊಡುವವರಿದ್ದಾರೆ. ನಿನ್ನೆ ನಮ್ಮ ನಾಯಕರಾದ ಯಡಿಯೂರಪ್ಪನವರು ಮಾತನಾಡಿದ್ದರು. ಆ 23 ಎಕರೆ ಸಿ.ವಿ. ರಾಮನ್ ನಗರದ ಹತ್ತಿರ ಡಿ ನೋಟಿಫೈ ಮಾಡಿರತಕ್ಕಂಥಾದ್ದರ ಬಗ್ಗೆ ನನಗೆ ಗೊತ್ತಿರುವುದನ್ನು ನಾನು ಹೇಳಿಬಿಡಬೇಕಾಗುತ್ತದೆ. ಏಕೆಂದರೆ ಸರ್ಕಾರದವರು ಎದ್ದು ನಾನು ಒಂದು ಪತ್ರ ಬರೆದಿದ್ದೆ ಇದಕ್ಕೆ ನಿಮ್ಮ ಪಕ್ಷದವರೇ ಡಿನೋಟಿಫೈ ಮಾಡಿ ಎಂದು ಪತ್ರ ಬರೆಯುವುದು ನೀವ ಇಲ್ಲಿ ಟೀಕೆ ಮಾಡುವುದು ಎಂದು ಅವರು ಹೇಳಬಾರದು. ನಾನು ಸ್ವಲ್ಪ ವಿವರ ಹೇಳಬೇಕಾಗಿದೆ. ಅದು ಸರ್ ಸಿ.ವಿ. ರಾಮನ್ ನಗರ ಅಲ್ಲ, ಬೆಂಡಿಗಾನಹಳ್ಳಿ, 200 ಎಕರೆ ಜಮೀನನ್ನು ಡಿ.ಆರ್.ಡಿ.ಓ.ನವರು ಕೇಳಿದ್ದರು. ಏತಕ್ಕೆ ಅಂದ್ರೆ ರಿಸರ್ಚ್‌ಡೆವಲಪ್‌ಮೆಂಟ್ ಕೆಲಸಕ್ಕೆ ಅಲ್ಲ ವಸತಿಗೆ ಎಂದು ಕೇಳಿದ್ದರು. ಬೇರೆ ಕೆಲಸಕ್ಕೆ 3 ಸಾವಿರ ಎಕರೆ 23 ಕಿಲೋಮಿಟರ್ ದೂರದಲ್ಲಿ ಅವರು ಅಕ್ವೈರ್ ಮಾಡಿಕೊಂಡಿದ್ದಾರೆ. ಇಲ್ಲಿ ಮನೆಗಳಿಗೆ ಎಂದು ಕೇಳಿದ್ದರು. ಇಲ್ಲಿ ಕೇಳಿದಂತಹ ಕಾಲದಲ್ಲಿ ಏನಾಯಿತು ಅಂದರೆ ಬೆಂಡಿಗಾನಹಳ್ಳಿ, ನಾರಾಯಣಪುರ ಕಗ್ಗಾದಾಸನಪುರ, ಈ ಮೂರು ಊರುಗಳು ಸೇರಿದಂತೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದರು. ತದನಂತರ ಏನಾಯಿತು ಎಂದರೆ ಬಿ. ನಾರಾಯಣಪುರಕ್ಕೆ ಸೇರಿದ್ದು ಕಗ್ಗದಾಸನಪುರಕ್ಕೆ ಸೇರಿದ್ದೆಲ್ಲಾ ಡಿ ನೋಟಿಫೈ ಆಗಿ ಹೋಯಿತು. ಡಿ ನೋಟಿಫೈ ಆದ ಮೇಲೆ ಏನು ಮಾಡಿದರು ಅಂದ್ರೆ ಇದು 1983 ರಿಂದ ನಡೆದುಕೊಂಡು ಬರುತ್ತಿದೆ. ಈ ಗ್ರಾಮಸ್ಥರದ್ದು ಹಾಗೆಯೇ ಉಳಿದುಕೊಂಡಿತು. ಕಡಿದಾಳ್ ಮಂಜಪ್ಪನವರೆ ಇದನ್ನು ಮೊದಲು ಕೋರ್ಟಿಗೆ ಹಾಕಿದರು. ರೈತರ ಪರವಾಗಿ ಅದನ್ನು ಹೇಳುತ್ತೇನೆ.

ಡಿ ಆರ್ ಡಿ ಓ ನವರು ಏನು ಮಾಡಿದರು ಎಂದರೆ ಇದಕ್ಕೆ ಬದಲಾಗಿ 200 ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. 12 ಅಡಿ ಸುತ್ತಾ 200 ಎಕರೆಗೆ ಕೋಟೆ ಕಟ್ಟಿಬಿಟ್ಟಿದ್ದಾರೆ. ಆ 200 ಎಕರೆಯಲ್ಲಿ 20 ಎಕರೆ ಉಪಯೋಗಿಸಿಕೊಂಡಿದ್ದಾರೆ, ಇನ್ನೂ 180 ಎಕರೆ ಖಾಲಿ ಇದೆ ಅದು ಅವರ ಸುಪರ್ದು ಇರತಕ್ಕಂತಾದ್ದು. ಇಷ್ಟೆಲ್ಲಾ ನಡೆಯುವಂತಹ ಕಾಲದಲ್ಲಿ ಏನಾಯಿತು, ನನ್ನ ಹತ್ತಿರ ಬಂದರು. ಈ 23 ಎಕರೆ ಡಿ ನೋಟಿಫೈ ಎಂದು ಹೇಳಿದರಲ್ಲ, 37 ಜನ ಅದರಲ್ಲಿ ಒಬ್ಬರಿಗೆ ಇಪ್ಪತ್ತೂವರೆ ಗುಂಟೆ ಇದೆ. ಒಬ್ಬರಿಗೆ 13 ಗುಂಟೆ ಇದೆ, ಒಬ್ಬರಿಗೆ ಹನ್ನೆರಡೂವರೆ ಗುಂಟೆ ಇದೆ. ಒಬ್ಬರಿಗೆ 18 ಗುಂಟೆ ಇದೆ. ಒಬ್ಬರಿಗೆ ಒಂಭತ್ತೂವರೆ ಗುಂಟೆ ಇದೆ. ಇನ್ನೊಬ್ಬರಿಗೆ ಇಪ್ಪತ್ತೂವರೆ ಗುಂಟೆ ಇದೆ, ಹದಿನೈದೂವರೆ ಗುಂಟೆ ಇದೆ. 4-5 ಜನ ಬಿಟ್ಟರೆ

* ಅನುಬಂಧ-2